Form No.4 (Civil)
Deposition
Sheets
(R.P.No.57)

## ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 4/2024

ಪ್ರಾ.ಸಾ. 1 ಚಾ.ಸಾ 4

| | | |
|---|---|---|
| ಹೆಸರು | : | ಬಸಪ್ಪ |
| ತಂದೆಯ ಹೆಸರು | : | ದ್ಯಾವಣ್ಣ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಚಾಮನಹಳ್ಳಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 28-11-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ರವರ ಪರಿಚಯ ಇರುತ್ತದೆ. ಚಾಸಾ-5 ರವರ ಪರಿಚಯ ಇರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ ಸುಮಾರು ನಾನು ನಮ್ಮೂರ ಅಗಸಿಯಲ್ಲಿ ಇದ್ದಾಗ ಪೊಲೀಸರು ಬಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು **ನಿ.ಪಿ.1** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಟ್ಟು ಐದು ಭಾವಚಿತ್ರಗಳನ್ನು ತೋರಿಸಿದ್ದು ಅದರಲ್ಲಿ ಇರುವುದನ್ನು ನುಡಿದಿರುತ್ತಾರೆ. ಸದರಿ ಭಾವಚಿತ್ರಗಳನ್ನು **ನಿ.ಪಿ.2 ರಿಂದ 6** ಎಂದು ಗುರುತಿಸಲಾಯಿತು. ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗಿರುವುದಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

2. ದಿ: 01.09.2023 ರಂದು ಮಧ್ಯಾಹ್ನ 12.00-1.00 ಗಂಟೆಯವರೆಗೆ ನನ್ನನ್ನು ಹಾಗೂ ಚಾಸಾ-5 ಸೋಮರಾಯರವರನ್ನು ಚಾಮನಹಳ್ಳಿ ಗ್ರಾಮದ ಸಣ್ಣಶರಣಪ್ಪ ಸಾವೂರು ಇವರ ಹೊಲದ ಗದ್ದೆಯ ಪಕ್ಕದಲ್ಲಿ ಇರುವ ಹಳ್ಳದ

ದಂಡೆಯಲ್ಲಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಅಲ್ಲಿ ಆರೋಪಿತರು ತನ್ನ ಮಗಳ ಶವವನ್ನು ಹೊತ್ತಿಟ್ಟ ಸ್ಥಳವನ್ನು ತೋರಿಸಿದ ಮೇರೆಗೆ ಪಂಚನಾಮೆ ಮಾಡಿ ಬರೆದು ಓದಿ ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಿ.ಪಿ.2 ರಿಂದ 6 ರವರೆಗೆ ಭಾವಚಿತ್ರ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

3. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

4. ನಿ.ಪಿ.2 ರಿಂದ 6 ಅನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.